ಅ) ಈ ಕೆಳಕಂಡ ಎರಡು ಪ್ರಕರಣಗಳನ್ನು ಸಿ.ಒ.ಡಿ ತನಿಖೆಗೆ ಒಪ್ಪಿಸಲಾಗಿದೆ,

1. ಮೈಸೂರು ಜಿಲ್ಲೆಯ ಕೊಳ್ಳೇಗಾಲ ತಾಲೂಕ್ ಪಂಚಾಯಿತಿಯಲ್ಲಿ ಜೀತಮುಕ್ತರ ಪುನರ್‌ವಸತಿ ಯೋಜನೆಯಲ್ಲಿ ನಡೆದ ಅವ್ಯವಹಾರ ಪ್ರಕರಣ

2. ರಾಣೆಬೆನ್ನೂರು ತಾಲೂಕ ಪಂಚಾಯಿತಿಯ ತೋಟಗಾರಿಕೆ ಇಲಾಖೆಗೆ ಸಂಬಂಧಿಸಿದ ಹನಿ ನೀರಾವರಿ ಕಾರ್ಯಕ್ರಮದ ಬಗ್ಗೆ ಎರಡೂ ಪ್ರಕರಣಗಳಲ್ಲಿ ತನಿಖಾ ವರದಿಯನ್ನು ಕಾಯಲಾಗುತ್ತಿದೆ.

ಇ) ಉದ್ಭವಿಸುವುದಿಲ್ಲ.

ಶಿವಮೊಗ್ಗ ಜಿಲ್ಲೆಯಲ್ಲಿ ಖಾಲಿ ಇರುವ ವೈದ್ಯರ ಹುದ್ದೆಗಳು.

758(954) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) :—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಶಿವಮೊಗ್ಗ ಜಿಲ್ಲೆಯಲ್ಲಿ ಖಾಲಿ ಇರುವ ವೈದ್ಯರ ಹುದ್ದೆಗಳ ಒಟ್ಟು ಸಂಖ್ಯೆ ಎಷ್ಟು? (ತಾಲ್ಲೂಕುವಾರು ವಿವರ ನೀಡುವುದು)

2. ಅದರಲ್ಲಿ ಗ್ರಾಮಾಂತರ ಪ್ರದೇಶದ ಆಸ್ಪತ್ರೆಗಳಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು?

3. ಅವು ಎಂದಿನಿಂದ ಖಾಲಿ ಇವೆ?

4. ಗ್ರಾಮೀಣ ಪ್ರದೇಶದ ಆಸ್ಪತ್ರೆಗಳಿಗೆ ಗುತ್ತಿಗೆ ವೈದ್ಯರ ಹುದ್ದೆ ಭರ್ತಿ ಮಾಡುವ ಅಧಿಕಾರ ಜಿಲ್ಲಾಧಿಕಾರಿಗಳಿಗೆ ಕೊಟ್ಟಿದ್ದರೂ ಶಿವಮೊಗ್ಗ ಜಿಲ್ಲೆಯ ಜಿಲ್ಲಾಧಿಕಾರಿಗಳು ಈ ಬಗ್ಗೆ ಕ್ರಮ ಕೈಗೊಳ್ಳದಿರಲು ಕಾರಣವೇನು?

5. ಯಾವಾಗ ಈ ಹುದ್ದೆಗಳನ್ನು ಭರ್ತಿ ಮಾಡಲಾಗುವುದು?

ಡಾ: ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :—

1. ಒಟ್ಟು 47 ವೈದ್ಯರ ಹುದ್ದೆ ಖಾಲಿ ಇವೆ.

(ತಾಲ್ಲೂಕುವಾರು ವಿವರ ಲಗತ್ತಿಸಿದೆ.)

2. 5 ಹುದ್ದೆಗಳು

3. ವಿವರ ಕೆಳಗಿನಂತಿದೆ.

1) ಸಂಯುಕ್ತ ಆಸ್ಪತ್ರೆ, ಕನ್ನಂಗಿ - 2 ವರ್ಷದಿಂದ

2) ಪಿಹೆಚ್‌ಯು, ಅರಳಗೂಡು - 2

3) ಪೆಹೆಚ್‌ಸಿ, ತಾಳಗುಪ್ಪ - ಮೇ 98ರಿಂದ

4) ಪಿಹೆಚ್‌ಯು, ಗುತ್ತಿಎಡೆಹಳ್ಳಿ - ಆಗಷ್ಟ್ 98ರಿಂದ

5) ಪಿಹೆಚ್‌ಯು ಹಾರೊಗುಳಿಗೆ - ಆಗಷ್ಟ್ 98ರಿಂದ

4. ಜಿಲ್ಲಾಧಿಕಾರಿಗಳು ಕ್ರಮ ಕೈಗೊಂಡಿದ್ದಾರೆ. ವಿವರ ಕೆಳಗಿನಂತಿದೆ.

1) ದಿನಾಂಕ : 15-4-98 ರಲ್ಲಿ 20 ಜನ ವೈದ್ಯರನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿದ್ದು, 17 ಜನ ಕರ್ತವ್ಯಕ್ಕೆ ಹಾಜರಾಗಿರುವರು.

2) ದಿನಾಂಕ : 2-9-98 ರಲ್ಲಿ 7 ಜನ ವೈದ್ಯರನ್ನು ನೇಮಕ ಮಾಡಿದ್ದು, 5 ಜನ ವೈದ್ಯರು ಕರ್ತವ್ಯಕ್ಕೆ ಹಾಜರಾಗಿರುವರು.

3) ದಿನಾಂಕ : 28-10-98 ರಲ್ಲಿ 2 ವೈದ್ಯರನ್ನು ನೇಮಿಸಿದ್ದು ಇವರು ಯಾರು ಕರ್ತವ್ಯಕ್ಕೆ ಹಾಜರಾಗಿಲ್ಲ.

5. ಜಿಲ್ಲಾ ಮಟ್ಟದ ಮತ್ತು ತಾಲ್ಲೂಕು ಮಟ್ಟದಲ್ಲಿ ಖಾಲಿ ಇರುವ ವೈದ್ಯರ ಹುದ್ದೆಗಳನ್ನು ಸ್ನಾತಕೋತ್ತರ ವ್ಯಾಸಂಗ ಮುಗಿಸಿ ಬರುವ ವೈದ್ಯರಿಂದ ಹಾಗೂ 99ರ ಸಾರ್ವತ್ರಿಕ ವರ್ಗಾವಣೆ ಸಮಯದಲ್ಲಿ ಭರ್ತಿ ಮಾಡುವ ಕ್ರಮ ತೆಗೆದುಕೊಳ್ಳಲಾಗುವುದು.

ಗ್ರಾಮಾಂತರ ಪ್ರದೇಶದಲ್ಲಿ ಖಾಲಿ ಇರುವ ವೈದ್ಯಾಧಿಕಾರಿಗಳ ಹುದ್ದೆಗಳನ್ನು ಭರ್ತಿ ಮಾಡಲು ಜಿಲ್ಲಾಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳುವುದು. ಮತ್ತು ನೇರ ನೇಮಕಾತಿಯಿಂದ 573 ವೈದ್ಯರನ್ನು ನೇಮಕ ಮಾಡುವ ಸಮಯದಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಶಿವಮೊಗ್ಗ ಜಿಲ್ಲೆಯ ವೈದ್ಯಾಧಿಕಾರಿಗಳ, ಜಿಲ್ಲೆ ತಾಲ್ಲೂಕುವಾರು ಹಾಗೂ ಗ್ರಾಮಾಂತರ ಪ್ರದೇಶದ ಖಾಲಿ ಹುದ್ದೆಗಳ ವಿವರ

ಕ್ರಮ ಸಂಖ್ಯೆ	ತಾಲ್ಲೂಕು	ಮಂಜೂರಾದ ಹುದ್ದೆಗಳ ಸಂಖ್ಯೆ	ಭರ್ತಿಯಾದ ಹುದ್ದೆಗಳ ಸಂಖ್ಯೆ	ಖಾಲಿಯಿರುವ ಪರಾ ಹುದ್ದೆಗಳ ಸಂಖ್ಯೆ
1.	ಮೆಗ್ಗನ್ ಆಸ್ಪತ್ರೆ	42	39	3
2.	ಶಿವಮೊಗ್ಗ	22	22	-
3.	ತೀರ್ಥಹಳ್ಳಿ	28	19	9
4.	ಸಾಗರ	17	13	4
5.	ಸೊರಬ	22	18	4
6.	ಶಿಕಾರಿಪುರ	28	17	11
7.	ಹೊಸನಗರ	20	10	10
8.	ಭದ್ರಾವತಿ	21	15	6
		200	153	47

ತೀರ್ಥಹಳ್ಳಿ ಜೆ.ಸಿ. ಆಸ್ಪತ್ರೆಯಲ್ಲಿ ಮಹಿಳಾ ವೈದ್ಯರ ಹುದ್ದೆ ಖಾಲಿ ಇರುವುದು.

760 (952) ಶ್ರೀ ಆರಗಜ್ಞಾನೇಂದ್ರ (ತೀರ್ಥಹಳ್ಳಿ) :— ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ಜೆ.ಸಿ. ಆಸ್ಪತ್ರೆಯಲ್ಲಿ ಮಹಿಳಾ ವೈದ್ಯರ ಹುದ್ದೆ ಖಾಲಿ ಇರುವುದು ನಿಜವೇ?

ಆ) ಹಾಗಿದ್ದಲ್ಲಿ ಬಡ ಮಹಿಳೆಯರ ಪ್ರಸೂತಿ ಮುಂತಾದ ಚಿಕಿತ್ಸೆಗೆ ತೊಂದರೆಯುಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಈ ಹುದ್ದೆ ತುಂಬದಿರಲು ಕಾರಣವೇನು? ಎರಡು ಹುದ್ದೆಯನ್ನು ತುಂಬಲಾಗುವುದು?